‘ಈ ಸಲದ ಟೂರ್‌ನಿಂದ ನನ್ಗೇ ಹೆಚ್ಚು ಲಾಭ...’ ಪಿಸುನುಡಿದು ಮೆಲುನಕ್ಕ ಚಿದಾನಂದ.

‘ಫೋನ್ ಮಾಡ್ತೀಯಲ್ಲ ಆಗಾಗ?’ ಮೈತ್ರಿಯ ಮುಖದಲ್ಲಿ ಮಂದಹಾಸದ ಸ್ಪಂದನ.

ಪ್ರಯಾಣ ಪ್ರಾರಂಭಿಸಿದ ‘ಸಂಭ್ರಮ’ ಡಿಲಕ್ಸ್ ಹೋಟೆಲಿನೆದುರು ಬಂದು ನಿಂತು ಬಿಟ್ಟಿತು ಬಸ್ಸು, ದಾರಿಯಲ್ಲೇ ಅಲ್ಲಲ್ಲಿ ಕೆಲವರನ್ನು ಇಳಿಸುತ್ತ ಒಡಲು ಹಗುರ ಮಾಡಿಕೊಂಡಿತ್ತು. ಇನ್ನುಳಿದ ಯಾತ್ರಿಗಳೆಲ್ಲ ಲಗ್ಗೇಜ್ ದಾರಿಗಳಾಗಿ ಪರಸ್ಪರ ಕೈಬೀಸುತ್ತ ತಂತಮ್ಮ ವಸತಿಯ ದಾರಿಗಳೆಡೆ ಕವಲಾದರು. ಸಂಭ್ರಮ ಸೋರಿ ಹೋದ ಆಯಾಸ ಹೊತ್ತ, ನಸು ವಿಷಾದ, ತುಸು ಮಂದಸ್ಮಿತದ ಮುಖಗಳೇ ಎಲ್ಲಾ. ಟಾಟಾ ಬೈಬೈಗಳ ನಿನಾದ, ಕಾರು ರಿಕ್ಷಾಗಳ ಸದ್ದಿನೊಂದಿಗೆ ಬೈಗಿನ ನಸುಕತ್ತಲೆ ಬಾಚಿಕೊಳ್ಳುತ್ತಾ ದಟ್ಟವಾಗತೊಡಗಿತು.

* * *

ದಿನ, ವಾರ, ಮಾಸಗಳು ಭರಭರನೆ ಉರುಳುತ್ತಾ ಹನ್ನೆರಡು ಮಾಸಗಳನ್ನು ತಳ್ಳಿಬಿಟ್ಟವು. ಅದೊಂದು ಮುಸ್ಸಂಜೆಯ ಸಮಯ. ಮೈತ್ರಿಯ ಸುದ್ದಿವಾಹಕ ಸದ್ದು ಮಾಡಿತು.

‘ಹಲೋ ಅಕ್ಕ... ನಾನು ಚಿದೂ... ಹೇಗಿದ್ದೀರಿ ನೀವೆಲ್ಲ...?’

‘ಓ... ಚಿದು.... ನಾವೆಲ್ಲ ಆರಾಮ... ನಿನ್ದೇನು? ವಿಶೇಷ ಏನೋ ಇರ್ಬೇಕಲ್ಲಾ?’

‘ಹೌದಕ್ಕ... ಕೆಲವು ಹೊಸ ಪೈಂಟಿಂಗ್ಸ್ ರೆಡಿಯಾಗಿದೆ. ಐ ಆಮ್ ಸೋ ಹ್ಯಾಪಿ ನೌ...’

‘ವೆರಿಗುಡ್... ಆದ್ರೇ... ನಿನ್ನ ಖುಷಿಗೆ ಹೊಸ ಪೈಂಟಿಂಗ್ಸ್ ಮಾತ್ರ ಕಾರಣ ಇರ್ಲಿಕ್ಕಿಲ್ಲ... ಬೇರೇನೋ ಇರ್ಬೇಕು ಅನ್ನಿಸ್ತಿದೆ ನನ್ಗೆ...’

‘ನಿಮ್ಮ ಗೆಸ್ ಕರೆಕ್ಟ್... ನನ್ನ ದಾರಿಗೊಬ್ಬಳು ಜತೆಯಾಗ್ತಿದ್ದಾಳೆ...

ನಾಳೆ ಸಂಡೆ... ಸಂಜೆ ನಿಮ್ಮಲ್ಲಿಗೆ ಬರ್ಲಾ?... ಎಲ್ಲಾ ಹೇಳ್ತೇನೆ...’

‘ಆಯ್ತು... ಬಾ... ಕಂಗ್ರಾಟ್ಸ್ ನಿನ್ಗೆ... ನಾಳೆ ಬಾ ಆಯ್ತಾ...?’

‘ಆಯ್ತಕ್ಕಾ...’

ಇತ್ತ ಕಡೆಯ ಚರವಾಣಿಗಳು ಮೂಕವಾದವು... ಇತ್ತಲಿನ ಒಳಧ್ವನಿಗೆ ಚಾಲನೆ ನೀಡಿದಂತೆ...’ ಚಿದೂಗೆ ಈಗ ಒಳ್ಳೆ ದಿನಗಳು ಬರ್ತಿದೆ ಅನ್ನಿಸ್ತಿದೆ... ಬರ್ಲಿ... ಪಾಪದವನು...’

* * *

ಭಾನುವಾರದ ಮುಸ್ಸಂಜೆಯ ವೇಳೆ. ಸುತ್ತಲಿನ ಬೆಳಕು ತೆಳುವಾಗುತ್ತಲಿತ್ತು... ಕತ್ತಲೆಗೆ ಆಹ್ವಾನ ನೀಡುತ್ತಾ. ಯಾರೂ ಇಲ್ಲದ ಮನೆಯಲ್ಲಿ ಮೈತ್ರಿ ಮೌನ ಮೂರ್ತಿ. ಸಿಟೌಟಿನಲ್ಲಿ ತಣ್ಣಗೆ ಕುಳಿತಿದ್ದಳು ಚಿದಾನಂದನ ಆಗಮನದ ನಿರೀಕ್ಷೆ ಹೊತ್ತು. ಅಷ್ಟರಲ್ಲಿ ಪ್ರತ್ಯಕ್ಷ ಚಿದಾನಂದ.

‘ಬಾ ಬಾ ಮದುಮಗ...’

‘ಅಕ್ಕಾ... ಯಾರೂ ಕಾಣ್ತಿಲ್ಲ? ಭಾವ ಮಧು ಎಲ್ಲಾ ಎಲ್ಲಿ?

ತಕ್ಕೊಳಿ... ಖಂಡಿತಾ ಎಲ್ರೂ ಬರ್ಬೇಕು...’

ಉತ್ಸಾಹದ ಅಲೆಯಲ್ಲಿ ತೇಲುತ್ತಿತ್ತು ಭರ ಭರ ಮಾತು, ಆಹ್ವಾನ ಪತ್ರಿಕೆ ಕೈಗಿಟ್ಟದ್ದೂ ಆಯ್ತು.

‘ಅವರಿಬ್ರೂ ಶಾಪಿಂಗ್ ಅಂತ ಹೋಗಿದ್ದಾರೆ...’ ಇನ್ವಿಟೇಶನ್ ಬಿಡಿಸಿದ ಮೈತ್ರಿ ಊರಗಲ ಮುಖ ಹೊತ್ತು ಪ್ರಶ್ನಿಸಿದಳು’ ಹುಡುಗಿ ದೀಪ್ತಿ... ಎಲ್ಲೋ ಕೇಳಿದ ಹಾಗೆ ಉಂಟಲ್ಲ... ಯಾರವಳು...?’

‘ದೀಪ್ತಿ... ಕನ್ಯಾಕುಮಾರಿ ಟೂರಿನಲ್ಲಿ ಸಿಕ್ಕಿದವಳು... ತಲೆ ತಿರುಗಿಬಿದ್ದವಳು... ಅಂತೆಲ್ಲ ಹೇಳಿದ್ದು ನೆನಪುಂಟಾ...?’

‘ಹೌದಲ್ವಾ...? ನೆನಪಾಯ್ತು... ಅದು ಒಂದು ವರ್ಷದ ಹಿಂದೆ... ಆದ್ರೆ ಇಷ್ಟೆಲ್ಲ ಡೆವಲಪ್‌ಮೆಂಟ್ ಹೇಗಾಯ್ತು...? ಅಂದ್ರೇ... ನಿನ್ನ ಕೈ ಹಿಡಿಯುವಷ್ಟು...?’

ಕಿಲಾಡಿತನದ ಪ್ರಶ್ನೆ... ಆದ್ರೂ ಕುತೂಹಲದ್ದೇ ಸಿಂಹಪಾಲು! ಮೈತ್ರಿಯ ಗುಣ ಅರಿಯದವನಲ್ಲ ಚಿದಾನಂದ... ಮುಗುಳ್ನಕ್ಕ... ವಿವರಿಸತೊಡಗಿದ.

‘ನಿಮ್ಗೂ ಗೊತ್ತಲ್ಲ... ನಾನು ‘ಕಾರುಣ್ಯ ಚಾರಿಟಿ ಸೊಸೈಟಿ’ಗೆ ಆಗಾಗ ಒಂದಷ್ಟು ದುಡ್ಡು ಹಾಕ್ತೇನೆ ಅಂತ... ಹಾಗೆ ಒಮ್ಮೆ ಹೋದಾಗ ದೀಪ್ತಿ ಮತ್ತು ಅವಳ ಅಕ್ಕ ಭಾವ ಅಲ್ಲಿದ್ರು... ಭಾವ ನಮ್ಮ ಪ್ರೈಮರಿಯ ಶಂಕರ್ ಮಾಷ್ಟ್ರು, ನನ್ಗೆ ಪರಿಚಯವೇ. ಅವ್ರೆಲ್ಲ ಆಗಷ್ಟೇ ವಾಪಸ್ ಹೊರಟಿದ್ರು, ಫಲಾನುಭವಿಗಳೇ ಇರ್ಬೇಕು ಅವರು... ನಾನು ದೀಪ್ತಿಯ ಆರೋಗ್ಯ ಮಾತ್ರ ವಿಚಾರಿಸಿಕೊಂಡೆ. ಆ ಮೇಲೆ ಶಂಕರಮಾಷ್ಟ್ರು ಆಗಾಗ ಸಿಕ್ತಾ ಇದ್ರು ಹಾಗೇ ಪರಿಚಯ ಗಟ್ಟಿಯಾಯ್ತು. ಇತ್ತೀಚೆಗೆ ಅವರಿಂದ್ಲೇ ಈ ಮ್ಯಾರೇಜ್ ಪ್ರಪೋಸಲ್ ಬಂತು... ನಾನು ಒಪ್ಪಿಕೊಂಡೆ...

‘ಸರಿ... ಆದ್ರೆ ಅವಳು ಟಿ.ಬಿ. ಪೇಷಂಟ್ ಅಂತೆ...?

‘ಅಕ್ಕಾ... ಟಿ.ಬಿ. ಹಿಂದೆ ಇತ್ತಂತೆ... ಈಗ ಹಾಗೇನೂ ಇಲ್ಲ, ಆರೋಗ್ಯವಾಗಿದ್ದಾಳೆ... ಒಂದು ಸ್ಕೂಲಲ್ಲಿ ಟೀಚರ್ ಆಗಿ ಕೆಲ್ಸ ಮಾಡ್ತಿದ್ದಾಳೆ...’

‘ವೆರಿಗುಡ್... ಎಲ್ಲಾ ನಾನು ಹೇಳಿದ ಹಾಗೇ ಆಯ್ತಲ್ಲ... ಕಲಾ ಸರಸ್ವತಿ ನಿನ್ನ ಕೈ ಬಿಡ್ಲಿಲ್ಲ... ದೀಪ್ತಿ, ಶಾಂತಿ ಇಬ್ರೂ ಸಿಕ್ಕಿದ್ರು ನಿನ್ಗೆ. ಇನ್ನು ಕಲಾ ಸೇವೆಯಿಂದ ನಿನ್ಗೆ ಹೆಸರು, ಯಶಸ್ಸು...? ನೀನಿನ್ನೂ ತುಂಬಾ ಪರಿಶ್ರಮ ಪಡ್ಬೇಕು ಆಯ್ತಾ...? ಸರಿ... ಮದ್ವೆಗೆ ನಾವೆಲ್ಲ ಖಂಡಿತಾ ಬರ್ತೇವೆ... ಆಯ್ತಲ್ಲ...?’

‘ಆಯ್ತಕ್ಕ... ಇನ್ನೂ ಒಂದು ವಿಶೇಷ ಉಂಟು... ಮದ್ವೆ ದಿನ ಸಂಜೆ ನಮ್ಮ ಮನೆಯಲ್ಲೇ ಒಂದು ಸಣ್ಣ ಪಾರ್ಟಿ ಮತ್ತು ನನ್ನ ಆರ್ಟ್ ಎಕ್ಸಿಬಿಷನ್ ಅರೇಂಜ್ ಮಾಡಿದ್ದೇನೆ, ಕೆಲವರಿಗೆ ಮಾತ್ರ ಇನ್ವಿಟೇಶನ್... ಅದಕ್ಕೂ ನೀವೆಲ್ಲ ಬರ್ಬೇಕು... ನಿಮ್ಗೆ ಅಲ್ಲಿ ಒಂದು ಸೂಪರ್ ಕೆಲ್ಸ ಉಂಟಕ್ಕಾ...

‘ಓ... ನಿನ್ಗೆ ಡಬ್ಬಲ್ ಕಂಗ್ರಾಟ್ಸ್... ಮದುವೆಗೂ ಎಕ್ಸಿಬಿಷನ್ ಅರೇಂಜ್ ಮಾಡಿದ್ದಕ್ಕೂ... ಡಬ್ಬಲ್ ಧಮಾಕಾ ಹಾಗಾದ್ರೆ! ಆದ್ರೆ... ನನ್ಗೆ ಸೂಪರ್ ಕೆಲ್ಸ ಏನಪ್ಪಾ...? ಪಟ್ಟಾಗಿ ತಿನ್ನೋದು ಬಿಟ್ಟು...?

‘ಅದಲ್ಲ... ನನ್ನ ಎಕ್ಸಿಬಿಷನ್ ಸಣ್ಣಮಟ್ಟದ್ದು... ಆದ್ರೆ ನೀವೇ ಅದನ್ನು ಇನಾಗರೇಶನ್ ಮಾಡ್ಬೇಕು ಅಂತ ನನ್ನ ಆಸೆ. ದೀಪ್ತಿಗೂ ನಿಮ್ಮ ಬಗ್ಗೆ ಎಲ್ಲಾ ಹೇಳಿದ್ದೇನೆ. ಅವಳಿಗೂ ಖುಷಿಯೇ ಅದು. ಹಾಗೇ ಒಂದೆರಡು ಹಾಡೂ ಹಾಡ್ಬೇಕು ನೀವು...

‘ಹಾಡ್ತೇನೆ ಓಕೆ... ಅದಕ್ಕೇನು? ಆದ್ರೆ ಇನಾಗರೇಶನ್ ಮಾಡ್ಲಿಕ್ಕೆ ನಾನ್ಯಾಕೆ...? ಚಿತ್ರಕಲೆಯ ಗಂಧಗಾಳಿ ಗೊತ್ತಿಲ್ಲದವಳಿಗೆ? ಯಾರಾದ್ರೂ ದೊಡ್ಡ ಆರ್ಟಿಸ್ಟನ್ನು ಕರೆಸ್ಬಾರ್ದಾ...?’

‘ಬೇರೆ ಯಾರೂ ಬೇಡ್ವೇ ಬೇಡ... ನೀವೇ ಸರಿ... ನನ್ನ ಈಗಿನ ಮನಸ್ಥಿತಿಗೆ ನೀವು ಎಷ್ಟು ಕಾರಣ ಅಂತ ನನಗ್ಗೊತ್ತು... ಎರಡೇ ಎರಡು ಮಾತಾಡಿ ಬಿಡಿ ಸಾಕು ಅಕ್ಕ.... ಅದೇ ನನ್ಗೆ ಆಶೀರ್ವಾದ... ಪ್ಲೀಸ್ ಒಪ್ಪಿಕೊಳ್ತೀರಲ್ವಾ...?’

‘ಆಯ್ತಪ್ಪಾ ನಿನ್ನಿಷ್ಟದ ಹಾಗೇ ಆಗ್ಲಿ... ಅದಕ್ಕೇನು...?’

‘ತುಂಬಾ ಥ್ಯಾಂಕ್ಸ್ ಅಕ್ಕ ನಿಜಕ್ಕೂ... ಖುಷಿಯಾಯ್ತು ಈಗ... ಮದುವೆಗೆ ಎಲ್ರೂ ಬರ್ಬೇಕು... ಭಾವನಿಗೆ ಆಮೇಲೆ ಫೋನ್ ಮಾಡಿ ಹೇಳ್ತೇನೆ... ಆಯ್ತಾ...?’

‘ಆಯ್ತು... ನನ್ಗೆ ಥ್ಯಾಂಕ್ಸ್ ಬೇಡ ಚಿದೂ... ಎಲ್ಲಾ ಒಳ್ಳೇದಾಯ್ತಲ್ಲ ಅಷ್ಟು ಸಾಕು...’

ನಗುಮುಖ ಹೊತ್ತು ನಿರ್ಗಮಿಸಿದ ಚಿದಾನಂದ. ತಾನು ಆ ದಿನ ಸಂಜೆ ಸಮಾರಂಭದ ವಿಐಪಿ ಅಂತ ಹಿಗ್ಗಲಿಲ್ಲ ಆ ಮಮತಾಮಯಿ. ‘ಅಂತೂ ಚಿದು ಹೊಸ ದಾರಿ ಹಿಡಿದ ‘ಗಾಡ್ ಈಸ್ ಗ್ರೇಟ್...’ ಎಂಬ ಸಂತೃಪ್ತಿ ಅವಳಿಗೆ.

* * *

ಬಿಡುವಿನಲ್ಲಿ ಚಿದಾನಂದ ಆಗಾಗ ಯೋಚಿಸುವುದಿದೆ. ಮತ್ತೆ ಕೈಗೆತ್ತಿಕೊಂಡ ತನ್ನ ಪುಟ್ಟ ಕಲಾರಾಧನೆ, ಕನ್ಯಾಕುಮಾರಿಯಲ್ಲಿ ದೇವಿಯೇ ಆಯ್ದುಕೊಟ್ಟಂತೆ ದೊರೆತ ಸೂಕ್ತ ಸಂಗಾತಿ... ಇತ್ಯಾದಿ ತಿರುವುಗಳ ತನ್ನ ಹೊಸ ಬದುಕಿನಲ್ಲಿ ಯಾವುದರ ಪಾತ್ರ ಎಷ್ಟೆಷ್ಟು? ಪ್ರಿಯ ಬಸ್ಸಿನ ಕಾಯಕವೆ? ಪರೋಪಕಾರ ಸ್ವಭಾವವೆ? ಕರುಣೆಯ ಹಿರಿಮೆಯೆ? ಮೈತ್ರಿಯಕ್ಕನಂಥವರ ಸಹೃದಯ ಹಾರೈಕೆಯೆ? ಅದೃಷ್ಟವೆ? ಎಲ್ಲವನ್ನೂ ಮೀರಿದ ದೈವಕೃಪೆಯೇ...? ಆದರೆ ಚಿಂತನೆಯನ್ನೇನೂ ಗಾಢಗೊಳಿಸುವುದಿಲ್ಲ ಆತ.... ಯೋಚನೆಗಳನ್ನೆಲ್ಲ ಕೊಡವಿಕೊಂಡು ಮತ್ತೆ ಕೆಲಸಕ್ಕೆ ಅಣಿಯಾಗುತ್ತಾನೆ.